

ಇಲ್ಲ. ಆಗಿನಿಂದ ಫ್ಯಾಷನ್ ಶೋಗಳಲ್ಲೂ ಈ ತೋಳಿನ ವಸ್ತ್ರಗಳದ್ದೇ ಕಾರುಬಾರು.

ಬಾಲಿವುಡ್‌ನಲ್ಲಿ ಕೋಲ್ಡ್ ಶೋಲ್ಡರ್ ಹಾಟ್ ಸೆಲ್ಲಿಂಗ್ ಟ್ರೆಂಡ್ ಕೂಡ ಆಯಿತು. ಬಾಲಿವುಡ್ ನಟಿಯರಾದ ಪ್ರಿಯಾಂಕಾ ಚೋಪ್ರಾ, ದೀಪಿಕಾ ಪಡುಕೋಣೆ, ಜಾಕ್ವೆಲಿನ್, ಸೋನಂ ಕಪೂರ್, ಅಲಿಯಾ ಭಟ್ ಇವರೆಲ್ಲರೂ ಈ ಕೋಲ್ಡ್ ಶೋಲ್ಡರ್‌ಗೆ ಭುಜ ಕೊಟ್ಟವರೇ. ಅದಾದ ನಂತರ ಬಂದ ವಸ್ತ್ರವಿನ್ಯಾಸಗಳಲ್ಲಂತೂ ಕೋಲ್ಡ್ ಶೋಲ್ಡರ್ ಮೆಚ್ಚದವರೇ ಇಲ್ಲವೇನೋ ಎಂಬಂತೆ ಆಯಿತು. ಈಗಂತೂ ನಮ್ಮ ಕನ್ನಡದ ಹಲವು ನಟಿಯರು ಕೋಲ್ಡ್ ಶೋಲ್ಡರ್ ತೊಟ್ಟು ಮಿಂಚುತ್ತಿರುವುದನ್ನು ನೋಡುತ್ತಿದ್ದೇವೆ.



ಈ ತೋಳು ಅಷ್ಟು ಸುದ್ದಿ ಮಾಡಲು ಕಾರಣವಾದರೂ ಏನು? ಭಾರತೀಯರು ಫ್ಯಾಷನ್ ಪ್ರಿಯರಾದರೂ ಅತಿಯಾದ ಎಕ್ಸ್‌ಪೋಷರ್‌ಗೆ ಒಲ್ಲೆ ಎನ್ನುತ್ತಾರೆ. ಆ ಒಂದು ಅಂಶವೇ ಕೋಲ್ಡ್ ಸ್ಲೀವ್ಸ್ ಪ್ರಸಿದ್ಧಿ ಪಡೆಯಲು ಕಾರಣವಾಗಿದ್ದು. ತೆರೆದೂ ತೆರೆದಂತಿರದ, ಆದರೂ ಸ್ಟೈಲಿಶ್ ಆಗಿರುವ, ಸೆಕ್ಸಿ ಎನಿಸುವ ಈ ವಿನ್ಯಾಸ ಹುಡುಗಿಯರ ಚಿತ್ತ ಕದಿಯಲು ಹೆಚ್ಚು ಸಮಯ ಹಿಡಿಯಲಿಲ್ಲ. ಸ್ಲೀವ್ ಲೆಸ್ ತೊಡಲು ಇಷ್ಟಪಡದ ಹುಡುಗಿಯರಿಗೂ ಈ ತೋಳು ಅಚ್ಚುಮೆಚ್ಚಾಯಿತು.

ಹೇಗಿತ್ತು, ಹೇಗಾಯಿತು: ಕೋಲ್ಡ್ ಶೋಲ್ಡರ್‌ನಲ್ಲಿ ಎರಡು ಬಗೆ. ಒಂದರಲ್ಲಿ ಭುಜ ತೆರೆದ ಸ್ಲೀವ್ ಇದ್ದು, ಕುತ್ತಿಗೆ ಭಾಗ ತುಂಬಿರುತ್ತದೆ. ಇನ್ನೊಂದರಲ್ಲಿ, ಬೊಹೆಮಿಯನ್ ಔರಾ ರೀತಿ, ಶೋಲ್ಡರ್‌ಗಳು ಜಾರಿದಂತಿದ್ದು, ಭುಜದಲ್ಲಿ ತೆಳ್ಳಗಿನ ಸ್ಪೆಗಟಿ ಸ್ಟ್ರಿಪ್‌ಗಳು ಮಾತ್ರ ಇರುತ್ತದೆ. ಮೊದಲೆಲ್ಲಾ ಗೌನ್‌ಗೆ ಮಾತ್ರ ಈ ತೋಳು ಸೀಮಿತವಾಗಿತ್ತು. ನಂತರ ಸರ್ಕುಲರ್ ಸ್ಕರ್ಟ್‌ಗೆ ಒಪ್ಪುವಂತೆ ವಿನ್ಯಾಸಗೊಳಿಸಲಾಯಿತು. ಪ್ರಚಾರದ ಭರಾಟೆ ಹೆಚ್ಚಿದಂತೆ ಎಲ್ಲಾ ರೀತಿಯ ವಸ್ತ್ರಗಳಿಗೂ ಇದನ್ನು ಒಗ್ಗಿಸುವ ಪ್ರಯತ್ನಗಳು ಕಂಡುಬಂದವು.

ನಿಮ್ಮ ಅಭಿರುಚಿಗೆ ತಕ್ಕಂತೆ ತೋಳಿನ ಅಳತೆಯ ಆಯ್ಕೆಯೂ ಸಿಗುತ್ತದೆ. ಸ್ವಲ್ಪ ತೆರೆದಿದ್ದರಿಂದ ಹಿಡಿದು ಹೆಚ್ಚು ತೆರೆದ ತೋಳಿನ ಟಾಪ್‌ಗಳೂ ಸಿಗುತ್ತವೆ.

ಸಡಿಲವಾದ, ಬಿಗಿಯಾದ ಟಾಪ್‌ಗಳಿಗೂ ಈ ವಿನ್ಯಾಸ ಒಪ್ಪುತ್ತದೆ. ತೆಳ್ಳಗಿದ್ದವರಿಗೆ, ದಪ್ಪಗಿದ್ದವರಿಗೂ ಇದು ಒಗ್ಗುತ್ತದೆ. ಆದ್ದರಿಂದಲೇ ಇದನ್ನು ಯೂನಿವರ್ಸಲ್ ಟ್ರೆಂಡ್ ಆಗಿ ನೋಡಲಾಗುತ್ತಿದೆ.

ಕ್ಯಾಶುಯಲ್, ಪಾರ್ಟಿ ವೇರ್, ಆಫೀಸ್‌ವೇರ್, ವೆಡ್ಡಿಂಗ್ ವೇರ್, ಜಿಮ್ ವೇರ್, ಜೊತೆಗೆ ಈಜುಡುಗೆಯಲ್ಲೂ ಈ ಟ್ರೆಂಡ್ ಕಾಣಿಸಿಕೊಳ್ಳುತ್ತಿದೆ. ಲೇಸ್‌ವರ್ಕ್, ಪೋಲ್ಕಾಡಾಟ್, ಫ್ರಿಂಜ್ ಎಲ್ಲಾ ಮಾದರಿಯಲ್ಲೂ ಲಭ್ಯ. ಬೆಲ್‌ಬಾಟಮ್, ಬೂಟ್‌ಕಟ್‌ಗೂ ಇದು ಟ್ರೆಂಡಿಯಾಗಿ ಕಾಣುತ್ತಿದೆ. ಲೆಗ್ಗಿನ್ಸ್, ಜೆಗ್ಗಿನ್ಸ್‌ಗೂ ಒಪ್ಪುತ್ತಿರುವುದು ಕಾಲೇಜು ಹುಡುಗಿಯರು ಇದಕ್ಕೆ ಮನಸೋತಿರುವ ಕಾರಣ.

## ಸಾಂಪ್ರದಾಯಿಕ ದಿರಿಸಿಗೂ..

ಕೋಲ್ಡ್ ಶೋಲ್ಡರ್ ಪಾಶ್ಚಾತ್ಯ ದೇಶದಲ್ಲಿ ರೂಪು ಪಡೆದಿದ್ದರಿಂದ ಮೊದಲು ಪಾಶ್ಚಾತ್ಯ ದಿರಿಸುಗಳಿಗಷ್ಟೇ ಹೊಂದಿಕೊಳ್ಳುವಂತೆ ಇವುಗಳನ್ನು ವಿನ್ಯಾಸಗೊಳಿಸಲಾಗಿತ್ತು. ಆದರೆ ಇದರ ವ್ಯಾಪ್ತಿ ಈಗ ಸಾಂಪ್ರದಾಯಿಕ ದಿರಿಸುಗಳಿಗೂ ಹಬ್ಬಿದೆ. ಲೆಹಂಗಾ, ಘಾಗ್ರಾ, ಸಲ್ವಾರ್‌ಗಳಿಗೂ ಈ ತೋಳಿನ ಸಿಂಗಾರವನ್ನು ವಿನ್ಯಾಸಗೊಳಿಸಲಾಗುತ್ತಿದೆ. ಕುರ್ತಾಗಳಿಗೂ ಕೋಲ್ಡ್ ಶೋಲ್ಡರ್‌ಗಳು ಕೂಲ್ ಆಗಿ ಕಾಣಿಸುತ್ತಿವೆ. ರೇಷ್ಮೆಯಲ್ಲಿ ಸಿದ್ಧಗೊಂಡ ಕ್ರಾಪ್‌ಟಾಪ್‌ಗಳಿಗೂ ಈ ತೋಳು ಚೆಂದ ಕಾಣುತ್ತಿವೆ. ಸೀರೆಗಳಿಗಂತೂ ಬಗೆ ಬಗೆ ಕೋಲ್ಡ್ ಶೋಲ್ಡರ್‌ಗಳ ರವಿಕೆಗಳೇ ಹುಟ್ಟಿಕೊಂಡಿವೆ. ತೀರಾ ಪಾಶ್ಚಾತ್ಯವೂ ಅಲ್ಲದ, ಸಂಪೂರ್ಣ ಸಾಂಪ್ರದಾಯಿಕವೂ ಅಲ್ಲದ ಫ್ಯೂಷನ್ ವಿನ್ಯಾಸವಾಗಿಯೂ ಹೊರಹೊಮ್ಮಿದೆ. ನೈಟ್‌ಡ್ರೆಸ್‌ಗಳಲ್ಲಿಯೂ ಕೋಲ್ಡ್‌ಶೋಲ್ಡರ್ ಆಯ್ಕೆಯಿರುವುದು ಇದರ ಹೆಗ್ಗಳಿಕೆ.

ಹಳೆಯ ಶೈಲಿಯಾದರೂ ಮಾಡರ್ನ್ ಆಗಿ ಸೀರೆ ಉಡಲು ಇಷ್ಟಪಡುವವರಿಗೆ ಈ ಕೋಲ್ಡ್ ಶೋಲ್ಡರ್ ರವಿಕೆಗಳು ಆಯ್ಕೆಯಾಗಿವೆ. ಆಧುನಿಕ, ಸಾಂಪ್ರದಾಯಿಕ ಎರಡೂ ಶೈಲಿಗಳನ್ನು ಬಯಸುವವರಿಂದ ಭಾರೀ ಮೆಚ್ಚುಗೆಯನ್ನೂ ಪಡೆದುಕೊಂಡಿವೆ.

## ಚಳಿಗಾಲಕ್ಕೆ ಬಂದಿದೆ ಕೋಲ್ಡ್ ಶೋಲ್ಡರ್

ಚಳಿಗೆ, ತೆರೆದ ತೋಳಿದ್ದರೆ ಹೇಗೆ ಒಪ್ಪುತ್ತದೆ? ಕಾಲಮಾನಕ್ಕೆ ತಕ್ಕಂತೆ ಈ ವಿನ್ಯಾಸದಲ್ಲೂ ಮಾರ್ಪಾಡು ಮಾಡಿಕೊಳ್ಳಲಾಗಿದೆ. ಚಳಿಗಾಲಕ್ಕೆ ತೊಡುವ ಸ್ವೆಟರ್‌ಗಳಿಗೂ ಕೋಲ್ಡ್ ಶೋಲ್ಡರ್‌ಗಳನ್ನು ಇಡಲಾಗಿದೆ. ಲಾಂಗ್ ಸ್ವೆಟರ್, ಶಾರ್ಟ್ ಸ್ವೆಟರ್‌ಗಳಲ್ಲೂ ಈ ತೋಳುಗಳನ್ನು ಅಳವಡಿಸಲಾಗಿದೆ. ಪುಲ್ ಓವರ್‌ಗಳಲ್ಲೂ ಈ ತೆರೆದ ತೋಳುಗಳು ಬರುತ್ತಿವೆ. ಕೋಲ್ಡ್ ಶೋಲ್ಡರ್ ಹೊಂದಿರುವ ಸ್ವೆಟ್ ಶರ್ಟ್‌ಗಳೂ ಎಲ್ಲೆಲ್ಲೂ ಮಾತಾಗಿದೆ.

ಮಕ್ಕಳಿಗೂ ಬಂದಿದೆ ಕೂಲ್ ತೋಳು: ದೊಡ್ಡವರಿಗಲ್ಲದೆ ಮಕ್ಕಳ ವಸ್ತ್ರಗಳಲ್ಲೂ 'ಕೋಲ್ಡ್ ಶೋಲ್ಡರ್'ಗಳನ್ನು ನೀಡಲಾಗುತ್ತಿದೆ. ಮಕ್ಕಳ ಲಾಂಗ್ ಡ್ರೆಸ್ ಹಾಗೂ ಫ್ರಾಕ್‌ಗಳಲ್ಲಿ ಇದನ್ನು ಅಳವಡಿಸಿದ್ದು, ಪುಟ್ಟ ಮಕ್ಕಳು ಈ ಉಡುಪುಗಳಲ್ಲಿ ಇನ್ನಷ್ಟು ಮುದ್ದಾಗಿ ಕಾಣುವುದಂತೂ ಸತ್ಯ. ■

## ಕೋಲ್ಡ್ ಶೋಲ್ಡರ್ ಧರಿಸುವ ಮುನ್ನ

- ನೀವು ತೊಡುವುದು ಪಾಶ್ಚಾತ್ಯ ಅಥವಾ ಸಾಂಪ್ರದಾಯಿಕ ವಸ್ತ್ರವೇ ಎನ್ನುವುದರ ಮೇಲೆ ಅಲಂಕಾರವೂ ಅವಲಂಬಿತವಾಗಿರುತ್ತದೆ.
- ಪಾಶ್ಚಾತ್ಯವಾದರೆ ಯಾವುದೇ ಒಡವೆಗಳನ್ನು ತೊಡದೇ ಇದ್ದರೆ ಚೆಂದ. ಸಾಂಪ್ರದಾಯಿಕ ಶೈಲಿಯಲ್ಲೂ ಒಡವೆ ಸೀಮಿತವಾಗಿರಬೇಕು. ಅತಿಯಾದ ಒಡವೆ ಈ ಶೈಲಿಗೆ ಒಪ್ಪದು.
- ಕುರ್ತಾ ತೊಡುವುದಾದರೆ ಅದಕ್ಕೆ ಬ್ಲಾಕ್ ಮೆಟಲ್, ಜರ್ಮನ್ ಸಿಲ್ವರ್ ಜ್ಯುವೆಲ್ಲರಿಗಳು ಸುಂದರ ನೋಟ ನೀಡುತ್ತವೆ.
- ತಿಳಿ ಬಣ್ಣದ ಬಾಟಮ್ ಇದ್ದರೆ ಗಾಢವಾದ ಟಾಪ್ ಇರಲಿ. ಪಲಾಜೊ ಶೈಲಿಯ ಪ್ಯಾಂಟ್ ಆದರೆ ಲೇಸ್‌ವರ್ಕ್ ಶೈಲಿ ಟಾಪ್ ಒಳ್ಳೆ ಮ್ಯಾಚ್ ಆಗುತ್ತದೆ.
- ಈ ಶೈಲಿಯ ತೋಳನ್ನು ಎದ್ದು ತೋರುವಲ್ಲಿ ಕೇಶವಿನ್ಯಾಸದ ಪಾತ್ರವೂ ಇದೆ. ಇದಕ್ಕೆ ಪೋನಿಟೇಲ್ ಅಥವಾ ಕೊಂಡೆ (ಬನ್) ಹೆಚ್ಚು ಒಪ್ಪುತ್ತದೆ.
- ಟಾಪ್‌ಗೆ ತಕ್ಕಂತೆ ಹ್ಯಾಂಡ್‌ಬ್ಯಾಗ್ ಕೂಡ ಮ್ಯಾಚ್ ಇದ್ದರೆ ಚೆಂದ.